**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**
**ಸಿಸಿ ನಂಬರ : 34/2024**

| | | | |
|---|---|---|---|
| ಸಾಕ್ಷಿಯ ಹೆಸರು | ಃ ನಾಗಾನಾಯ್ಕ | ಸಿ.ಡಬ್ಲ್ಯು | 10 |
| ತಂದೆಯ ಹೆಸರು | ಃ ಮದುರಾನಾಯ್ಕ | ಪಿ.ಡಬ್ಲ್ಯು | 5 |
| ವಯಸ್ಸು | ಃ 58 ವರ್ಷ | | |
| ಉದ್ಯೋಗ | ಃ ವ್ಯವಸಾಯ | | |
| ವಾಸ ಸ್ಥಳ | ಃ ತರೀಕೆರೆ. | | |

**ದಿನಾಂಕಃ 10-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ನನಗೆ ಚಾಸಾ-1 ಮತ್ತು 9 ಇವರ ಪರಿಚಯ ಇದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ದಿನಾಂಕ 28-11-2023 ರ ಒಂದು ದಾಖಲೆಯನ್ನು ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆ ಪಂಚನಾಮೆ ಆಗಿದ್ದು ಅದನ್ನು ನಿಪಿ.11 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.11 ಬಿ ಎಂದು ಗುರುತಿಸಲಾಯಿತು. ಹೋದ ವರ್ಷ ನವೆಂಬರ್ ತಿಂಗಳಿನಲ್ಲಿ ಸದರಿ ದಾಖಲೆಗೆ ನನ್ನ ಸಹಿ ಹಾಕಿರುತ್ತೇನೆ, ಅದನ್ನು ಚಾಸಾ-1 ರವರ ಮನೆಯಲ್ಲಿ ಹಾಕಿರುತ್ತೇನೆ. ಚಾಸಾ-1 ರವರ ಮನೆಗೆ ಕಳ್ಳತನದ ಬಗ್ಗೆ ಪಂಚನಾಮೆ ಮಾಡಲು ಬಂದಾಗ ಕಳ್ಳತನ ಮಾಡಿದ ವ್ಯಕ್ತಿಯನ್ನು ತೋರಿಸಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಕಳ್ಳತನ ಮಾಡಿದ ವ್ಯಕ್ತಿ ಈ ದಿನ ನಾನು ನೋಡುತ್ತಿರುವ ಫೋಟೋಗಳಲ್ಲಿ ಇದ್ದಾನೆ. ಸದರಿ ಫೋಟೋಗಳನ್ನು ನಿಪಿ.12 ರಿಂದ 15 ಎಂದು ಈಗಾಗಲೇ ಗುರುತಿಸಲಾಗಿದೆ. (ವಕೀಲರು ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ಹೇಳುತ್ತಾರೆ.) ಆ ದಿನ ಪೊಲೀಸರು ಆರೋಪಿಯನ್ನು ಉಡುಪಿಯಿಂದ ಕರೆದುಕೊಂಡು ಬಂದಿದ್ದೇವೆ ಎಂದು ಹೇಳಿದರು. ಬಂಗಾರ, ಬಟ್ಟೆ, ನಗದು ಮತ್ತು ಕಾರು ಕಳ್ಳತನ ಆಗಿವೆ ಎಂದು ಸ್ಥಳದಲ್ಲಿ ಮಾಹಿತಿ ಸಿಕ್ಕಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಸ್ಥಳ ಪಂಚನಾಮೆಗೆ ಹೋದ ಬಗ್ಗೆ ನಾನು ಸಾಕ್ಷಿ ಹೇಳಿರುತ್ತೇನೆ. ಸ್ಥಳದ ಚೆಕ್ಕು ಬಂದಿ ಹೇಳಲು ಬರುತ್ತದೆ. ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ಯಾರದ್ದೋ ಮನೆ, ದಕ್ಷಿಣಕ್ಕೆ ರಸ್ತೆ ಮತ್ತು ಉತ್ತರಕ್ಕೆ ಡಾ. ಗಿರೀಶರವರ ಮನೆ ಇದೆ. ನಾನು ಹೇಳುತ್ತಿರುವ ಚೆಕ್ಕುಬಂದಿ ಸರಿಯಾಗಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಓದಿದ ನಂತರ ಸಹಿ ಹಾಕಿರುತ್ತೇನೆ. ನನ್ನ ಮತ್ತು ಚಾಸಾ-1 ರವರ ಮನೆ 150 ಅಡಿ ಅಂತರದಲ್ಲಿದೆ, ನಾವು ಒಂದೇ ಏರಿಯಾದಲ್ಲಿ ಇರುವ ಕಾರಣ ನನಗೆ ಅವರು ಮೊದಲಿನಿಂದಲೂ ಪರಿಚಯ ಇರುತ್ತಾರೆ. ಅವರಿಗೆ ಸಹಾಯ ಮಾಡಲು ಅವರ ಕೋರಿಕೆಯ ಮೇರೆಗೆ ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಪೊಲೀಸರ ಹೇಳಿಕೆಯ ಮೇರೆಗೆ ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲವೆಂದರೆ ನನಗೆ ಗೊತ್ತಿಲ್ಲ.

**<u>ಮರುವಿಚಾರಣೆ :</u>** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

Sd/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ**
**ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.**